172

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ : 191/ಅಪರಾಧ-3/2011

ಮಹಾನಿರ್ದೇಶಕರು ಮತ್ತು ಆರಕ್ಷಕ
ಮಹಾನಿರೀಕ್ಷಕರು ರವರ ಕಛೇರಿ,
ಕರ್ನಾಟಕ ರಾಜ್ಯ ಬೆಂಗಳೂರು-01
ದಿನಾಂಕ : 2 /09/2011

## ಸುತ್ತೋಲೆ

ವಿಷಯ : ಮಹಿಳೆಯರ ಮೇಲಿನ ಆಸಿಡ್ ದಾಳಿಗಳನ್ನು ತಡೆಗಟ್ಟುವ ಬಗ್ಗೆ.

* * *

ಆಸಿಡ್ ದಾಳಿಗೆ ಒಳಗಾದಾಗ, ಅದು ಮಹಿಳೆಯರನ್ನು ವಿರೂಪಗೊಳಿಸುವುದಲ್ಲದೆ ಜೀವನ ಪರ್ಯಂತ ದೈಹಿಕವಾಗಿ ಕುಂದುವಂತೆ ಮಾಡುತ್ತದೆ. ಆಸಿಡ್ ದಾಳಿಗೆ ತುತ್ತಾದ ಮಹಿಳೆ ಸಹಜ ಸ್ಥಿತಿಗೆ ಮರಳುವುದು ವಿರಳ. ದೇಹವು ವಿರೂಪಗೊಳ್ಳುವುದರಿಂದ ಜೀವನ ಪರ್ಯಂತ ನರಕಯಾತನೆ ಮತ್ತು ಅಪಮಾನ ಅನುಭವಿಸುತ್ತಾರೆ. ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್ ಆದೇಶ ಸಂಖ್ಯೆ : 1585 (5) ರನ್ವಯ ಇಂತಹ ಪ್ರಕರಣಗಳನ್ನು ವಿಶೇಷ ಗಂಭೀರ ಪ್ರಕರಣಗಳೆಂದು ಪರಿಗಣಿಸಬೇಕು ಮತ್ತು ಎಲ್ಲಾ ಘಟಕಾಧಿಕಾರಿಗಳು ಈ ಕೆಳಗೆ ನಮೂದಿಸಿರುವ ಮಾರ್ಗಸೂಚನೆಗಳನ್ನು ತಪ್ಪದೆ ಪಾಲಿಸಲು ಆದೇಶಿಸಲಾಗಿದೆ.

1. ಈ ಪ್ರಕರಣಗಳ ತನಿಖೆಗೆ ಸಂಬಂಧಿಸಿದಂತೆ, ನೊಂದ ವ್ಯಕ್ತಿಯ ಕುಟುಂಬದೊಂದಿಗೆ ಯಾರೆ ಬಂದು ದೂರು ನೀಡಿದಾಗ ತಕ್ಷಣವೇ ಪ್ರಕರಣವನ್ನು ದಾಖಲಿಸಬೇಕು.
2. ಈ ಪ್ರಕರಣಗಳ ತನಿಖೆಯನ್ನು ಕೂಡಲೇ ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಗಳಿಂದ ತನಿಖೆ ನಡೆಸಬೇಕು.
3. ಈ ಪ್ರಕರಣವನ್ನು ದಾಖಲಿಸುವಾಗ ಭಾರತ ದಂಡ ಸಂಹಿತೆಯ ಕಲಂ : 320, 326, 307 ಗಳನ್ನು ಅಳವಡಿಸಿಕೊಳ್ಳುವುದನ್ನು ಎಚ್ಚರಿಕೆಯಿಂದ ಪರಿಗಣಿಸುವುದು.
4. ಅಪರಾಧಕ್ಕೆ ಬಳಸಿದ ವಸ್ತುಗಳನ್ನು ಸಂಗ್ರಹಿಸಿ ತಕ್ಷಣವೇ ರಾಸಾಯನಿಕ ಪರೀಕ್ಷೆಗೆ ಕಳುಹಿಸುವುದು.

--2

171

5. ನೊಂದ ವ್ಯಕ್ತಿಯನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಿ, ವೈದ್ಯಕೀಯ ಚಿಕಿತ್ಸೆ ಕೊಡಿಸುವುದು ಮತ್ತು ಆ ವ್ಯಕ್ತಿಯ ಬಟ್ಟೆಯನ್ನು ಸಂಗ್ರಹಿಸಿ ರಾಸಾಯನಿಕ ಪರೀಕ್ಷೆಗೆ ಕಳುಹಿಸುವುದು.

6. ಅಪರಾಧಕ್ಕೆ ಕಾರಣ ಕಂಡು ಹಿಡಿದು ಅಪರಾಧಿಯನ್ನು ಕೂಡಲೇ ಬಂಧಿಸಿ ಕಾನೂನಿನಂತೆ ಶಿಕ್ಷೆ ವಿಧಿಸಬೇಕು.

7. ನೊಂದ ವ್ಯಕ್ತಿಗೆ ಅಥವ ಅವರ ಕುಟುಂಬದವರಿಗೆ ಉಂಟಾದ ಹಾನಿಯ ಕುರಿತು ನ್ಯಾಯಾಲಯವು/NHRC/SHRC ಪರಿಹಾರ ಕೋರುವಂತೆ ತಿಳುವಳಿಕೆ ನೀಡ ಬೇಕು ಹಾಗೂ ಪರಿಹಾರ ಪಡೆಯಲು ಎಲ್ಲಾ ವಿಧವಾದ ಸಹಕಾರ ನೀಡತಕ್ಕದ್ದು.

8. ಸಾಮಾನ್ಯವಾಗಿ ಭಗ್ನ ಪ್ರೇಮ, ಏಕಮುಖ ಪ್ರೇಮ, ಮುಂತಾದ ವಿಷಯಗಳಲ್ಲಿ ಬೆದರಿಕೆ ಹಾಕಿದ ಪ್ರಕರಣಗಳು ಠಾಣೆಗಳಲ್ಲಿ ವರದಿಯಾದಾಗ, ಈ ದೂರುಗಳನ್ನು ಠಾಣೆಗಳಲ್ಲಿ ಸಾಮಾನ್ಯ ದೂರುಗಳೆಂದು ಪರಿಗಣಿಸಿ, ವಿಚಾರಣೆ ನಡೆಸಿ, ಅಸಂಜ್ಞೆಯ ಪ್ರಕರಣವನ್ನು ದಾಖಲಿಸಿ, ಅವಶ್ಯಕತೆ ಕಂಡು ಬಂದಲ್ಲಿ ನ್ಯಾಯಾಲಯದಿಂದ ಅನುಮತಿ ಪಡೆದು, ಕಾನೂನಿನ್ವಯ ಕ್ರಮ ತೆಗೆದುಕೊಳ್ಳತಕ್ಕದ್ದು. ಇಂತಹ ದೂರುಗಳನ್ನು ಠಾಣಾ ಪ್ರಭಾರ ಅಧಿಕಾರಿಯು ಸ್ವೀಕರಿಸಿದಾಗ ಪ್ರಾರಂಭಿಕ ಹಂತದಲ್ಲಿಯೇ ಸೂಕ್ತ ಕ್ರಮ ತೆಗೆದುಕೊಂಡರೆ ಇಂತಹ ಪ್ರಕರಣಗಳನ್ನು ತಡೆಯಬಹುದು ಮತ್ತು ಒಬ್ಬ ಮಹಿಳೆ ವಿರೂಪಗೊಂಡು, ಜೀವನ ಪರ್ಯಂತ ಅನುಭವಿಸಬಹುದಾದ ಗಂಡಾಂತರ ದಿಂದ ಪಾರು ಮಾಡಬಹುದು.

9. ಆಸಿಡ್ ಉತ್ಪಾದನೆ, ಮಾರಾಟ, ಖರೀದಿ, ಸಾಗಾಣಿಕೆ ಮತ್ತು ಹೊಂದುವುದನ್ನು ನಿಯಂತ್ರಿಸಲು ಸೂಕ್ತ ಕಾನೂನಿನ್ವಯ ಕ್ರಮ ತೆಗೆದುಕೊಳ್ಳತಕ್ಕದ್ದು.

ಮಹಾನಿರ್ದೇಶಕರು ಮತ್ತು ಆರಕ್ಷಕ
ಮಹಾನಿರೀಕ್ಷಕರ ಪರವಾಗಿ

ಗೆ,
ಪೊಲೀಸ್ ಕಮೀಷನರ್, ಬೆಂಗಳೂರು ನಗರ/ಮೈಸೂರು ನಗರ/ಹುಬ್ಬಳ್ಳಿ-ಧಾರವಾಡ/ ಮಂಗಳೂರು ನಗರ.
ಎಲ್ಲಾ ಘಟಕದ ಪೊಲೀಸ್ ಅಧೀಕ್ಷಕರುಗಳು, ಕೆ.ಜಿ.ಎಫ್ ಮತ್ತು ರೈಲ್ವೇಸ್ ಸೇರಿದಂತೆ,

ಪ್ರತಿ :
ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ, ತರಬೇತಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು.

ಪ್ರತಿಯನ್ನು ಅಭಿನಂದನೆಗಳೊಂದಿಗೆ :-
ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.